ಇಸ್ತಿಹಾರ್‌ನಾಮೆ.

ಕೊಪ್ಪ್ಲೀಸಬೇಟೆ ಸಬ್ ಡಿವೀಜ್ ಆಫೀಸಿನಿಂದ.

ಮಾಗಡಿ ತಾಲ್ಲೂಕು ಐಮಂಗುತ್ತಾ ಕೆಂಪಾಪುರದ ಗ್ರಾಮದ ರೈತರಿಗೆ, ಐಮಂಗುತ್ತಿಗೆದಾರಿಗೆ ಸಹಿತ ತಿಳಿಯಪಡಿಸುವದೇನಂದರೆ,

ಮಾಗಡಿ ತಾಲ್ಲೂಕು ಕೆಂಪಾಪುರದ ಗ್ರಾಮ ಸರ್ವೆ ನಟ್ಟ ಮೆಂಟ್ ಲೆಗ್ಯೆ 1896ನೇ ಇಸವಿ ಜೂನ್ ತಾರೀಖು 15ರಲ್ಲಿ ಸೋಲೂರು ಪೊಕ್ಕಾಂನಲ್ಲಿ ಗೊತ್ತು ಮಾಡಿ ಯಿರುವದರಿಂದ ಸದರೀ ತಾರೀಖಿನಲ್ಲಿ ಈ ಗ್ರಾಮದ ರೈತರು ಮತ್ತು ತಕರಾರುದಾರ್ರು, ಗುತ್ತಿಗೆದಾರ್ರು ಮತ್ತು ಯಿರತಕ್ಕ ಸಂಬಂಧಪಟ್ಟ ವಿಶಿಷ್ಟರೂ ನನ್ನು ರೂಬರೂ ಹಾಜರಾಗಿ ಅವರವರ ತಕರಾರುಗಳನ್ನ ತಿಳಿಸಿಕೊಳ್ಳಬೇಕು. ಹಾಗೆ ಹಾಜರು ಆಗದೆ ತಪ್ಪಿದರೆ ಸದರೀ ವ್ಯಾಳೆ ಹಾಜರಿದ್ದು ವೊಪ್ಪಿದರೆ ಹ್ಯಾಗೋ ಆದೀರೀತೀಲಿ ಫೈಸಲ್ಮಾಡುವದು. ನಂತರ ಬರುವ ತಕರಾರು ಗಳು ಅಂಗೀಕರಿಸಲಾಗದು.

ಎತಾರೀಖು 18ನೇ ಮೇ 1896ನೇ ಇಸವಿ.

ಕೆ. ಏ. ಪುಟ್ಟಣ್ಣಚೆಟ್ಟಿ,
ಸಬ್ ಡಿವಿಜ್ ಆಫಿಸರ್.

ಕೋಲಾರ್ ಡಿಸ್ಟ್ರಿಕ್ಟ್.

ತಾರೀಖು 13ನೇ ಏಪ್ರಿಲ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

I. ಕೋಲಾರ ಡಿಸ್ಟ್ರಿಕ್ಟು ಚಿಕ್ಕಬಳ್ಳಾಪುರ ಸಬ್ ಡಿವಿಜನಿಗೆ ಕೀರದ ಗೋರೀಪಿದನೂರು ತಾಲ್ಲೂಕಿನಲ್ಲಿ ಆಫಿಷಿಯಲ್ ಸಾಲ್ ಅಂದರೆ 1896ನೇ ಇಸವಿ ಜುಲೈ ಲಾಗಾಯತು 1897ನೇ ಇಸವಿ ಜೂನ್ ಆಖೈರಿವರಿಗೆ ಕುರಂಗದ ಕಲ್ಲುಗಳನ್ನ ಜಮಾಯಿಸಿಕೊಳ್ಳತಕ್ಕ ಹಕ್ಕುದಾರಿಯನ್ನ ಸದರಿ ತಾಲ್ಲೂಕು ಕಛೇರಿಯಲ್ಲಿ 1896ನೇ ಇಸವಿ ಮೇ ಮಾಹೆ 28ನೇ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು.

II. ಸದರಿ ಹರಾಜು ಸದರಿ ತಾರೀಖು ದಿವಿ 11 ಘಂಟೆಗೆ ಅಮಲ್‌ದಾರ್ ಯಾ ಶಿರಸ್ತೇದಾರ್ರಿಂದರಾಗಲಿ ಹರಾಜು ಪ್ರಾರಂಭ ಮಾಡಲ್ಪಡುವರು.

III. ಸದರಿ ಹರಾಜು ಚಿಕ್ಕಬಳ್ಳಾಪುರ ಸಬ್ ಡಿವಿಜ್ ಆಫಿಸರವರ ಮಂಜೂರಾತಿಗೆ ವಳಪಟ್ಟದ್ದಾಗಿರುತ್ತೆ.

IV. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಅಥವಾ ಮತ್ತೊಬ್ಬ ರಿಗೋಸ್ಕರ ಸವಾಲ್ ಮಾಡುತ್ತಾರೆಯೇ ನಮೂದಿಸಬೇಕು ಮತ್ತೊಬ್ಬರಿಗೋಸ್ಕರವಾದರೆ ಅಂಥಾವರ ಬರಹಮೂಲಕವಾದ ಅಧಿಕಾರ ಪತ್ರಿಕೆಯನ್ನ ಅಂದರೆ ಅವರ ದಸ್ಕತ್ತು ಇರತಕ್ಕ ಕಾಗದವನ್ನ ಹಾಜರ್ಮಾಡಬೇಕು ಇಲ್ಲವಾದರೆ ಅಂಥಾವರ ಸವಾಲನ್ನ ಅಂಗೀಕರಿಸುವದಿಲ್ಲ.

ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಕೇಕಡಾ 25 ರೂಪಾಯಿನಂತೆ ಆಗುವ ಮೊಬಲಗು ಡಿಪಾಜಿಟ್ ಇಡಬೇಕು ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಕ್ರಯದ ಮೊಬಲಗ್ ಮೇಲೆ ರೂಪಾಯಿ 1ಕ್ಕೆ 1 ಆಣೆ ಮೇರಿಗೆ ಆಗುವ ಲೋಕಲ್‌ಸೆಸ್ ಬೇಬೇಲ್ ಬಾಕಿ ಮೊಬಲಗನ್ನ ಪಾವತಿ ಮಾಡಬೇಕು ಹಾಗೆ ಡಿ ಪಾಜಿಟ್ ಮೊಬಲಗೇ ಆಗಲಿ ಪೂರಾ ಮೊಬಲಗೇ ಆಗಲಿ ಕೊಡದೆ ತಪ್ಪಿದರೆ ಡಿಪಾಜಿಟ್ ಮೊಬಲಗು ಕೊಟ್ಟು ಬಾಕಿ ಮೊಬಲಗು ಕೊಡದೆ ತಪ್ಪಿದರೆ ಡಿಪಾಜಿಟ್ ಮೊಬಲಗು ದಂಡವಾಗಿ ಸರಕಾರಕ್ಕೆ ಸೇರಿಸಿಕೊಂಡು ಹರಾಜು ಹಕ್ಕುದಾರಿಯನ್ನು ಅವ್ವಲ್ ಕ್ರಯದಾರನ ಖರ್ಚಿಗೂ ಮತ್ತು ಲಕ್ಸಾನಿಗೂ ವಳಪಡಿಸಿ ಪುನಹ ಹರಾಜು ಮಾಡಲ್ಪಡುವದು.

ಇಜಾರೆದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಕಲ್ಲುಗಳನ್ನ ಅವನ ಅನುಮತಿ ಕಿವಾಯಿ ತೆಗದುಕೊಳ್ಳಕೂಡದು ಈ ಜಮೀನಿನ ಹಿಡುವಳಿದಾರನಾದರೂ ಸ್ವಂತ ಪುಪಯೋಗಕ್ಕೋಸ್ಕರವಾಗಿ ಜಮಾಯಿಸತಕ್ಕದ್ದಲ್ಲ ಆದರೆ ಜಮಾಯಿಸತಕ್ಕ ಕಲ್ಲುಗಳನ್ನ ಇಜಾರೇದಾರನಿಗೆ ಕೊಡಬೇಕೇ ಹೊರ್ತು ಮತ್ತೊಬ್ಬರಿಗೆ ಕೊಡತಕ್ಕದ್ದಲ್ಲ.

ಇಜಾರೆದಾರನು ಹುಲ್ಲುಬನ್ನಿ ಇಜಾರೆದಾರನ ಚರಾವ್ ಹಕ್ಕಿನಲ್ಲಿ ಪ್ರವೇಶಿಸಕೂಡದು ಇಜಾರೆದಾರನಿಗೆ ಇಜಾರೆ ಮಾಡಿಕೊಂಡು ಇರುವ ಪ್ರದೇಶದಲ್ಲಿ ಇರತಕ್ಕ ಕಲ್ಲುಗಳನ್ನ ಜಮಾಯಿಸಿಕೊಳ್ಳತಕ್ಕ ಹಕ್ಕು ಮಾತ್ರ ಇರತಕ್ಕದ್ದಾಗಿರುತ್ತೆ ಪರಂತು ಬಂಜರು ಜಮೀನು ಗಳನ್ನ ಸಾಗುವಳಿ ಲೆಗ್ಯೆ ಕೊಡುವದಕ್ಕೋಸ್ಕರ ಬರುವ ದರಖಾಸ್ತುಗಳಿಗೆ ಇಜಾರೆದಾರನ ಅಭ್ಯಂತರವೇನೂ ಇಲ್ಲ.

ಇಜಾರೆದಾರನು ಕಲ್ಲುಗಳಿಗೋಸ್ಕರ ಜಮೀನುಗಳನ್ನ ಅಗಿಯಕೂಡದು ಬಂದು ವ್ಯಾಳೆ ಆಗದಲ್ಲಿ ಸಾಗುವಳಿ ಲಾಯಕಾಗುವಂತೆ ಗುಣಿಗಳನ್ನ ಮುಚ್ಚಿಸಬೇಕು ಇಜಾರದಾರನು ಯಾವ ಪ್ರದೇಶದಲ್ಲಿ ಜಮಾಯಿಸುತ್ತಾನೆಯೋ ಗ್ರಾಮ ಕಲ್ಲಿನ ಮೊತ್ತ ಯಾವ ಸ್ಥಳಕ್ಕೆ ರವಾನೆ ಮಾಡುತ್ತಾನೋ ಈ ವಗ್ಗೈರೆ ತಪ್ಪೀಲ್ ಕಂಡು ಅಮಲ್‌ದಾರ್ರಿಂದ ಮಾಫು ಲೈಸೆನ್ಸು ಪಡದು ರವಾನಿಸಬೇಕು ಲೈಸೆನ್ಸು ಇಲ್ಲದೆ ರವಾನಿಸಕೂಡದು ಈ ಮೇರಿಗೆ ತಿಳಿಯಪಡಿಸಿ ಅಧೆ.

ಬಿ. ಜಿ. ಕೃಷ್ಣಯ್ಯಂಗಾರ್,
ಆ|| ಡೆಪ್ಯೂಟಿ ಕಮ್ಮಿಷನರ್.

ತುಮಕೂರು ಡಿಸ್ಟ್ರಿಕ್ಟು.

1896ನೇ ಇಸವಿ ಮೇ ತಾರೀಖು ರಲ್ಲಿ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಮತ್ತು ಮದ್ದಗಿರಿ ಡಿಪೋದಲ್ಲಿರುವ ಈ ಕೆಳಗೆ ನಮೂದಾಗುವ ಸಾಮಾನುಗಳನ್ನು 1896ನೇ ಇಸವಿ ಜೂನ್ 15ರಲ್ಲಿ ತುಮಕೂರು ಡಿಪೋದಲ್ಲಿಯೂ 19ರಲ್ಲಿ ಮದ್ದಗಿರಿ ಡಿಪೋದಲ್ಲೂ ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ ಹರಾಜು ಮಾಡಲ್ಪಡುತ್ತೆ.